


# ದಕ್ಷಿಣ ಆಫ್ರಿಕಾ ಸಚಿತ್ರ ಕಥನ

ಯಾವುದೋ ಹೊಸ ಜಾಗವೊಂದಕ್ಕೆ ಭೇಟಿ ನೀಡಿದಾಗ ಆ ನೆನಪುಗಳನ್ನು ಶಾಶ್ವತಗೊಳಿಸಿಕೊಳ್ಳಲು ಫೋಟೊ ತೆಗೆದುಕೊಳ್ಳುವುದು ರೂಢಿ. ಆದರೆ ನಾವು ನೋಡಿದ ಜಾಗ, ವ್ಯಕ್ತಿ, ಸನ್ನಿವೇಶಗಳು ನಮ್ಮ ಕಣ್ಣಿನ ಕ್ಯಾಮೆರಾದಲ್ಲಿ ಸೆರೆಸಿಕ್ಕಿ, ಮನಸ್ಸಿನಲ್ಲಿ ಸೇವ್ ಆದಷ್ಟು ಸುರಕ್ಷಿತವಾಗಿ ಬೇರೆಡೆ ಇರಲು ಸಾಧ್ಯವೇ? ಇದ್ದಿದ್ದನ್ನು ಇದ್ದ ಹಾಗೆಯೇ ಬಿಂಬಿಸುವ ಛಾಯಾಚಿತ್ರಗಳಿಗಿಂತ, ಮನದಲ್ಲಿ ಸೇವ್ ಆಗಿರುವ ಚಿತ್ರಗಳು ಕಲಾವಿದನ ಸೃಜನಶೀಲತೆಯ ಮೂಸೆಯಲ್ಲಿ ಮರುಸೃಷ್ಟಿಗೊಂಡಾಗ ಅದಕ್ಕೆ ಸಿಗುವ ಆಯಾಮಗಳೇ ಬೇರೆ. ಇಂಥದ್ದೊಂದು ವಿಶಿಷ್ಟ ಪ್ರಯತ್ನ ಇಲ್ಲಿದೆ. ದಕ್ಷಿಣ ಆಫ್ರಿಕಾದ ಬೇರೆ ಬೇರೆ ಜಾಗಗಳಿಗೆ ಭೇಟಿ ನೀಡಿದ ಅನುಭವವನ್ನು ಅಕ್ಷರಗಳ ಜೊತೆಗೆ ರೇಖಾಚಿತ್ರಗಳ ಮೂಲಕವೂ ಲೇಖಕಿ ಹಂಚಿಕೊಂಡಿದ್ದಾರೆ. ಅದೇ ಭೂಮಿ–ಬಾನುಗಳನ್ನು ಹೊಸದಾಗಿ ಕಾಣಿಸುವ ಈ ನುಡಿಚಿತ್ರವನ್ನು ವಿ‘ಚಿತ್ರ’ ಕಥನ ಎನ್ನಬಹುದು.

■ ಲೇಖನ, ರೇಖಾಚಿತ್ರ: **ಜಯಶ್ರೀ ಭಟ್, ಸಿಂಗಪುರ**